**ಶ್ರೀ ಕೆ.ಎಸ್. ಈಶ್ವರಪ್ಪ:** ಖಂಡಿತ ಮಾಡಿ ಕೊಡುತ್ತೇನೆ.

**ಶ್ರೀ ಬಿ. ಶಿವರಾಮು:** ಧನ್ಯವಾದಗಳು.

**ಅಧ್ಯಕ್ಷರು:** ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡರು (ಸದಸ್ಯರು ಹಾಜರಿರಲಿಲ್ಲ)

**ಗುಡಿಬಂಡೆ ಪ್ರಥಮದರ್ಜೆ ಕಾಲೇಜಿನಲ್ಲಿ ವಿಜ್ಞಾನ ವಿಭಾಗ ಆರಂಭಿಸುವುದು.**

154 (876) ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ): ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

(ಅ) ಗುಡಿಬಂಡೆ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನ ವಿಭಾಗವನ್ನು ಪ್ರಾರಂಭಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ;

(ಆ) ಇದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು ?

**ಶ್ರೀ ಡಿ.ಹೆಚ್. ಶಂಕರಮೂರ್ತಿ** (ಉನ್ನತ ಶಿಕ್ಷಣ ಸಚಿವರು):

(ಅ) ಇಲ್ಲ.

(ಅ) ಉದ್ಭವಿಸುವುದಿಲ್ಲ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ:** ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ, ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಏಕೆ 'ಇಲ್ಲ' ಎಂದು ನಾನು ಕೇಳುತ್ತೇನೆ. ಉದ್ಭವಿಸುವುದಿಲ್ಲವೆಂದರೆ ಏಕೆ ಇಲ್ಲ, ನಾನು ಕೇಳಿರುವುದು ನನ್ನ ಕ್ಷೇತ್ರದ ಗುಡಿಬಂಡೆ ತಾಲ್ಲೂಕಿನಲ್ಲಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನ ವಿಭಾಗವನ್ನು ಸ್ಥಾಪನೆ ಮಾಡಬೇಕೆಂಬ ಉದ್ದೇಶದಿಂದ ಕೇಳಿರತಕ್ಕಂಥದ್ದು. ನಮಗೆ ಆ ಉದ್ದೇಶ ಇಲ್ಲವೆಂದರೆ, ಏಕೆ ಇಲ್ಲವೆಂದು ಕೇಳದೆ ಮತ್ತೇನು ಮಾಡಬೇಕು? ಏಕೆ ಇಲ್ಲ ಹೇಳಿ. ಅಲ್ಲಿ ಅತಿ ಹಿಂದುಳಿದಂತಹ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ವಿಜ್ಞಾನ ಓದಿಸಬಾರದು ಎಂದು ನಿಮ್ಮ ಉದ್ದೇಶವೇನಾದರೂ ಇದೆಯಾ?

**ಶ್ರೀ ಡಿ.ಹೆಚ್. ಶಂಕರಮೂರ್ತಿ:** ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಎಲ್ಲಾ ಕಡೆ ಎಲ್ಲಾ ಭಾಗಗಳಲ್ಲಿಯೂ ವಿಜ್ಞಾನದ ಕಾಲೇಜುಗಳನ್ನು ಪ್ರಾರಂಭ ಮಾಡಬೇಕೆಂಬ ಸದಿಚ್ಛೆ ನಮಗೆ ಇದೆ. ಆದರೆ, ಕಳದೆ ಹಲವಾರು ವರ್ಷಗಳಿಂದ ಈ ರೀತಿ ಹೆಚ್ಚಿನ ವಿಜ್ಞಾನ ಕಾಲೇಜುಗಳನ್ನು ಪ್ರಾರಂಭ ಮಾಡುವ ಪ್ರಕ್ರಿಯೆ ನಿಂತು ಹೋಗಿತ್ತು. ಈ ವರ್ಷ ಪ್ರಾರಂಭ ಮಾಡುತ್ತಿದ್ದೇವೆ. ಪ್ರಾರಂಭ ಮಾಡುವಾಗ ನಮ್ಮ ರಾಜ್ಯದಲ್ಲಿರತಕ್ಕಂತಹ ಅಷ್ಟೂ ಕಡೆ, 174 ತಾಲ್ಲೂಕುಗಳಲ್ಲಿ ಒಟ್ಟಿಗೆ ಪ್ರಾರಂಭ ಮಾಡುವುದಕ್ಕಾಗುವುದಿಲ್ಲ. ಕೆಲವು ಭಾಗದಲ್ಲಿ ಆಗುತ್ತದೆ, ಕೆಲವು ಭಾಗದಲ್ಲಿ ಆಗುವುದಿಲ್ಲ. ದೌರ್ಭಾಗ್ಯವಶಾತ್ ಶ್ರೀರಾಮರೆಡ್ಡಿಯವರ ಕ್ಷೇತ್ರ ಈ ವರ್ಷದ ಅದ್ಯತಾ ಪಟ್ಟಿಯಲ್ಲಿ ಬರುವುದಿಲ್ಲ. ಪ್ರಯತ್ನ ಮಾಡುತ್ತೇನೆ. ಈಗ ಅಷ್ಟೊಂದು

12.00 P.M.

ಆಸಕ್ತಿಯಿಂದ ಕೇಳುತ್ತಿದ್ದಾರೆ, ನನ್ನ ಕ್ಷೇತ್ರದಲ್ಲಿ ಪ್ರಥಮ ದರ್ಜೆ ಕಾಲೇಜು ಆಗಬೇಕು ಎಂದು. ಈಗ ಈ ಉತ್ತರ ನಾನು ಕೊಟ್ಟ ತಕ್ಷಣ ಇಲ್ಲಿ ಕುಳಿತಿರುವ ಎಲ್ಲಾ ಶಾಸಕರುಗಳು ನಮ್ಮ ಕ್ಷೇತ್ರ ಏಕೆ ತೆಗೆದುಕೊಳ್ಳುವುದಿಲ್ಲ ಎಂದು ಕೇಳುತ್ತಾರೆ. ಆದರೆ ನಮಗೂ ಒಂದು ಲಿಮಿಟೇಶನ್ ಇದೆ. ಫೈನಾನ್‌ಶಿಯಲ್ ಲಿಮಿಟೇಶನ್‌ನೊಳಗೆ ಎಷ್ಟು ಸಾಧ್ಯ ಅಷ್ಟು ಕಾಲೇಜುಗಳನ್ನು ಮಾಡುತ್ತೇನೆ. ಈ ವರ್ಷವೇ ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗುವುದಾದರೆ ಖಂಡಿತ ಮಾಡುತ್ತೇನೆ. ಈಗಲೇ ಮಾಡದೇ ಇರುವುದಕ್ಕೆ ಬೇರೆ ಅಂಶಗಳು ಇವೆ. ಹಣಕಾಸಿನ ಸವಲತ್ತು ಬೇಕಾಗುತ್ತದೆ. ನಮ್ಮ ಇಲಾಖೆ ತಯಾರಿ ಮಾಡಬೇಕಾಗುತ್ತದೆ. ಈ ಹಿನಲೆಯಲ್ಲಿ ಈಗ ಮಾಡಿರತಕ್ಕಂಥ ನಮ್ಮ ಪಟ್ಟಿಯೊಳಗೆ ನಿಮ್ಮ ಗುಡಿಬಂಡೆ ಇಲ್ಲ. ಆದರೆ ನೀವು ಇಷ್ಟೊಂದು ಪ್ರೀತಿಯನ್ನು ನಮ್ಮ ಮೇಲೆ ತೋರಿಸುತ್ತಿದ್ದೀರಿ. ಖಂಡಿತ ನಾನು ಪ್ರಯತ್ನ ಮಾಡುತ್ತೇನೆ.

**ಶ್ರೀ ವಾಟಾಳ್ ನಾಗರಾಜ್:** ಅವರ ಮೇಲೆ ಪ್ರೀತಿ ಇರುವುದಕ್ಕೋಸ್ಕರವೇ ತಾವು ಏನು ಉತ್ತರ ಕೊಟ್ಟಿದ್ದೀರೆಂದರೆ ಇಲ್ಲ ಎನ್ನುವ ಉತ್ತರ ಕೊಟ್ಟಿದ್ದೀರಿ. ಇದು ಪ್ರೀತಿ ವಿಷಯ.

**ಅಧ್ಯಕ್ಷರು:** ವಾಟಾಳ್ ನಾಗರಾಜ್‌ರವರೆ, ನೀವು ಮಾತನಾಡಲು ನನ್ನ ಪರ್ಮಿಶನ್ ತೆಗೆದುಕೊಂಡಿರಾ? ಪರ್ಮಿಶನ್ ತೆಗೆದುಕೊಂಡು ಎದ್ದು ನಿಂತುಕೊಂಡು ಮಾತನಾಡುವುದನ್ನು ಅಭ್ಯಾಸ ಮಾಡಿಕೊಳ್ಳಿ. ಎಲ್ಲರೂ ಹಾಗೆಯೇ ಮಾತನಾಡುವುದನ್ನು ಕಲಿತುಬಿಟ್ಟಿದ್ದೀರಿ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ:** ಮಾನ್ಯ ಅಧ್ಯಕ್ಷರೆ, ನಾನು ಕೇಳಿದ್ದೇನೆಂದರೆ, ಈಗ ಆಗಲೇ ಅಲ್ಲಿ ಫಸ್ಟ್ ಗ್ರೇಡ್ ಕಾಲೇಜ್ ಇದೆ. ಅಲ್ಲಿ ವಿಜ್ಞಾನ ವಿಭಾಗವನ್ನು ತೆರೆಯಿರಿ ಎಂದು ಮಾತ್ರ ನಾನು ಕೇಳಿರುವುದು. ಅಲ್ಲಿ ವಿಜ್ಞಾನ ಕಾಲೇಜನ್ನೇ ಪ್ರಾರಂಭ ಮಾಡಿ ಎಂದು ನಾನು ಕೇಳುತ್ತಿಲ್ಲ. ಇದು ಒಂದು ವಿಚಾರ. ಇನ್ನು ಎರಡನೆಯದಾಗಿ ಈ ವರ್ಷದ ಯೋಜನೆಯಲ್ಲಿ ನಿಮ್ಮ ತಾಲ್ಲೂಕು ಸೇರಿಲ್ಲವೆಂದು ಉತ್ತರ ಕೊಡುತ್ತಾರೆ. ಇವರು ಯೋಜನೆ ಮಾಡುವಾಗ ಇಟ್ಟಿರತಕ್ಕಂಥ ಮಾನದಂಡಗಳೇನು ಎಂಬುದನ್ನಾದರೂ ನಮಗೆ ಹೇಳಬೇಕು. ಏಕೆಂದರೆ ಡಾ: ನಂಜಂಡಪ್ಪ ವರದಿ ಪ್ರಕಾರ ಮೋಸ್ಟ್ ಬ್ಯಾಕ್‌ವರ್ಡ್ ಇರುವ 32 ತಾಲ್ಲುಕುಗಳಲ್ಲಿ ನನ್ನ ಕ್ಷೇತ್ರವೂ ಕೂಡ ಒಂದು. ಇದನ್ನೇ ನೀವು ಆದ್ಯತೆಯನ್ನಾಗಿ ತೆಗೆದುಕೊಳ್ಳಲಿಲ್ಲವೆಂದರೆ ಇನ್ನು ಯಾವುದನ್ನು ತಾವು ತೆಗೆದುಕೊಂಡಿದ್ದೀರಿ? ನಿಮ್ಮ ಆದ್ಯತೆಗಳಿಗೆ ಏನು ಆಧಾರವೇನು? ಕ್ರೈಟೇರಿಯಾ ಏನು? ಅದಕ್ಕೆ ಉತ್ತರ ಹೇಳಿ.

**ಶ್ರೀ ಡಿ.ಹೆಚ್. ಶಂಕರಮೂರ್ತಿ:** ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಈಗಾಗಲೇ ಗುಡಿಬಂಡೆಯೊಳಗೆ ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ,

ಭೂಗೋಳ ಶಾಸ್ತ್ರ ಮಾತ್ರ ಇದೆ. ಆದರೆ ವಿಜ್ಞಾನ ವಿಭಾಗ ಪ್ರಾರಂಭಿಸುವಂಥ ಪ್ರಸ್ತಾವನೆ ಸರ್ಕಾರದ ಮುಂದೆ ಬರಲಿಲ್ಲ. ಇದುವರೆಗೆ ಬಂದಿಲ್ಲ. ಆದರೆ ಈಗ ತಾವು ಅಗ್ರಹಪೂರ್ವಕವಾಗಿ ಈ ಬಗ್ಗೆ ಹೇಳುತ್ತಿದ್ದೀರಿ. ಖಂಡಿತವಾಗಿ ನಾನು ಇದನ್ನು ಪರಿಗಣಿಸುತ್ತೇನೆ. ಆದರೆ ಯಾವುದೇ ಆರ್ಟ್ಸ್ ಕಾಲೇಜಿನಲ್ಲಿ ಸೈನ್ಸ್ ವಿಭಾಗವನ್ನು ಪ್ರಾರಂಭ ಮಾಡುವುದಕ್ಕೆ ಕೆಲವು ಮಾಹಿತಿಗಳು ನಮಗೂ ಬೇಕಾಗುತ್ತದೆ ಮತ್ತು ಅದಕ್ಕೆ ತಕ್ಕ ವ್ಯವಸ್ಥೆಗಳನ್ನು ಮಾಡಬೇಕಾಗುತ್ತದೆ. ಉದಾಹರಣೆಗೆ ಅಲ್ಲಿಗೆ ನಾವು ಹೋಗಿ ನೋಡಿಕೊಂಡು ಬರಬೇಕಾಗುತ್ತದೆ. ಅಲ್ಲಿ ಸ್ಟೂಡೆಂಟ್ಸ್ ಎಷ್ಟು ಜನ ಬರುತ್ತಿದ್ದಾರೆ. ಪಿ.ಯು. ಕಾಲೇಜ್‌ಗಳು ಸುತ್ತಮುತ್ತ ಎಷ್ಟಿವೆ, ಅದರ ಫೀಡ್‌ಬ್ಯಾಕ್ ಇದೆಯಾ, ಇತ್ಯಾದಿ ಅಂಶಗಳನ್ನೆಲ್ಲಾ ನಾವು ನೋಡಿ ಫೈಲ್ ತಯಾರು ಮಾಡಬೇಕಾಗುತ್ತದೆ. ಆದ್ದರಿಂದ ಆ ಹಿನ್ನೆಲೆಯಲ್ಲಿ ನಾನು ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದೇನೆ. ಆಗಲಿಲ್ಲ. ನಾನು ಪ್ರಾಮಾಣಿಕವಾದ ಉತ್ತರವನ್ನು ಕೊಟ್ಟಿದ್ದೇನೆ. ನಿಮ್ಮ ಗುಡಿಬಂಡೆಯನ್ನು ಈ ವರ್ಷದ ಪಟ್ಟಿಯಲ್ಲಿ ನಾವು ಸೇರಿಸಿಲ್ಲ. ಆದರೆ ಅದಕ್ಕೇ ಮತ್ತೆ ನಾನು ಹೇಳುತ್ತೇನೆ ವಾಟಾಳ್‌ರವರು ಸಿಟ್ಟಾಗುವುದಿಲ್ಲವೆಂದು ತಿಳಿದು ಹೇಳುತ್ತಿದ್ದೇನೆ. ನೀವು ಇಷ್ಟೊಂದು ಪ್ರೀತಿಯಿಂದ ಕೇಳುತ್ತಿದ್ದೀರಿ. ಖಂಡಿತವಾಗಿ ನಾನು ಇದನ್ನು ಪರಿಗಣಿಸುತ್ತೇನೆ.

**ಸಂತೇಮಾರನಹಳ್ಳಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಮಂಜೂರಾತಿ**

155 (840) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ): ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

(ಅ) ಸಂತೇಮರಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಯಾವುದೇ ಪ್ರಥಮ ದರ್ಜೆ ಕಾಲೇಜು ಇಲ್ಲದೇ ಇರುವ ಕಾರಣ ಸಂತೇಮರಳ್ಳಿ ಕೇಂದ್ರ ಸ್ಥಾನದಲ್ಲಿ ಸರ್ಕಾರ 2006–07ರಲ್ಲಿ ಹೊಸದಾಗಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಲು ಸೂಕ್ತ ಕಟ್ಟಡ ಹಾಗೂ ಸ್ಥಳಾವಕಾಶವನ್ನು ಕಲ್ಪಿಸಿಕೊಡಲಾಗುವುದೇ ;

(ಆ) ಹಾಗಿದ್ದಲ್ಲಿ, ಎಂದು ಮಂಜೂರಾತಿ ನೀಡಲಾಗುವುದು ?

ಶ್ರೀ ಡಿ.ಹೆಚ್. ಶಂಕರಮೂರ್ತಿ (ಮಾನ್ಯ ಉನ್ನತ ಶಿಕ್ಷಣ ಸಚಿವರು):

(ಅ) ಮತ್ತು (ಆ) ಸಂತೇಮರಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸುವ ಯಾವುದೇ ಪ್ರಸ್ತಾಪ ಸರ್ಕಾರದ ಮುಂದಿರುವುದಿಲ್ಲದ ಕಾರಣ ಸೂಕ್ತ ಕಟ್ಟಡ ಹಾಗೂ ಸ್ಥಳಾವಕಾಶವನ್ನು ಕಲ್ಪಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

**ಶ್ರೀ ಆರ್. ಧ್ರುವನಾರಾಯಣ:** ಮಾನ್ಯ ಅಧ್ಯಕ್ಷರೆ, ನನಗೂ ಕೂಡ 'ಉದ್ಭವಿಸುವುದಿಲ್ಲ', 'ಇಲ್ಲ' ಎಂದೇ ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಪ್ರಶ್ನೆ ಇಷ್ಟೇ. ನನ್ನ ಸಂತೇಮರಳ್ಳಿ ಕ್ಷೇತ್ರ ಮೀಸಲು ಕ್ಷೇತ್ರವಾಗಿದೆ. ನನ್ನ ಕ್ಷೇತ್ರದಲ್ಲಿ ಒಂದೇ ಒಂದು ಪ್ರಥಮ ದರ್ಜೆ ಕಾಲೇಜು ಕೂಡ ಇಲ್ಲ. ಐದು. ಪಿ.ಯು. ಕಾಲೇಜ್‌ಗಳು ಇವೆ. ಒಂದು ವಿಧಾನಸಭಾ ಕ್ಷೇತ್ರದಲ್ಲಿ ಒಂದಾದರೂ ಪ್ರಥಮ